ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

ರಿಜಿಸ್ಟರ್ಡ್ ನಂ. ಕೆಆರ್‌ಎನ್‌ಎಸ್ — ೧೯

ಸಂಪುಟ ೧ ಸಂಚಿಕೆ ೧೧ ಕೊಪ್ಪ ೩೧-೧೦-೮೨ ಭಾನುವಾರ ಬೆಲೆ ೪೦ ಪೈಸೆ

ನಮ್ಮ ಪತ್ರಿಕೆಯ ಕಚೇರಿ

ನಮ್ಮ ಪತ್ರಿಕೆಯ ಕಚೇರಿ ಹಾಗೂ ಅಚ್ಚುಕೂಟವನ್ನು ತಿಲಕ್ ರಸ್ತೆ (ಕಾಫಿ ಬೋರ್ಡ್ ಕಚೇರಿ ಇರುವ ರಸ್ತೆ) ಯ ೨೨ (ಬಿ) ನಂಬರಿನ ಮನೆಯಲ್ಲಿ ತೆರೆದಿದ್ದೇವೆ. (ಸಾರಿವಾಸ್ ಟೆಕ್ಸ್‌ಟೈಲ್ಸ್ ಹಿಂಭಾಗ.) **ಸಂಪಾದಕರನ್ನು ಭೇಟಿ ಮಾಡುವ ಸಮಯ: ಬೆಳಿಗ್ಗೆ ೧೧ ೩೦ ರಿಂದ ಸಂಜೆ ೪-೩೦ ಗಂಟೆವರೆಗೆ ಮಾತ್ರ.**

'ಮುಂಜಾವು' ಚಂದಾ ದರ: ಆಜೀವ ಚಂದಾ ೨೦೦ ರೂ

ವಾರ್ಷಿಕ ಚಂದಾ ೨೦ ರೂ; ಬಿಡಿ ಪ್ರತಿ ೪೦ ಪೈಸೆ

ಪೋಲೀಸ್ ಇಲಾಖೆಗೆ ಸವಾಲಾದ ಘಟನೆ:

ಜೈಲಿನಿಂದ ಕೈದಿಗಳು ಪರಾರಿ

ನ.ರಾ.ಪುರ: ಇಲ್ಲಿನ ಉಪಬಂದೀಖಾನೆಯಿಂದ ಅ.೨೭-೨೮ರ ರಾತ್ರಿ ಐವರು ಬಂದಿಗಳು ಮಾಳಿಗೆ ಕಿತ್ತು ಮಾಡಿನ ಹಂಚು ತೆಗೆದು ಪರಾರಿಯಾದ ಘಟನೆ ವರದಿಯಾಗಿದೆ. ಅವರಲ್ಲಿ ಮೂವರು ಶಿಕ್ಷೆಗೊಳಗಾದ ಬಂದಿಗಳು ಮತ್ತು ಇಬ್ಬರು ವಿಚಾರಣೆ ಎದುರಿಸುತ್ತಿದ್ದವರು.

ಬಾಳೆಹೊನ್ನೂರಿನ ಕಾಫಿ ಸಂಶೋಧನ ಕೇಂದ್ರದಲ್ಲಿ ಗುಮಾಸ್ತನಾಗಿದ್ದು ಹಣ ದುರುಪಯೋಗದ ಅಪರಾಧಕ್ಕಾಗಿ ೫ ವರ್ಷದ ಸಜೆ ಅನುಭವಿಸುತ್ತಿದ್ದ ರಮೇಶ, ಈಚೆಗಷ್ಟೇ ಬಂಧಿಸಲ್ಪಟ್ಟು ೧ ವರ್ಷದ ಶಿಕ್ಷೆಗೆ ಗುರಿಯಾಗಿದ್ದ ಕೊಡಗಿನ ಕುಖ್ಯಾತ ಕಾರು ಕಳ್ಳರಾದ ಗಣೇಶ ಮತ್ತು ಆರ್ಮುಗಂ, ಗಂಧದ ಕಳ್ಳಸಾಗಣೆಯ ಆರೋಪದಲ್ಲಿ ವಿಚಾರಣೆ ಎದುರಿಸುತ್ತಿರುವ ನಜೀರ್ ಅಹಮದ್, ಹಾಗೂ ಬಂಡಿಗಡಿಯ ಪಂಚಲೋಹ ವಿಗ್ರಹಕಳುವಿನ ಆರೋಪದ ಮೇಲೆ ಈಚೆಗೆ ಕೊಪ್ಪ ಪೋಲೀಸರಿಂದ ಬಂಧಿಸಲ್ಪಟ್ಟು ವಿಚಾರಣೆ ಎದುರಿಸುತ್ತಿದ್ದ ಹಾಲ್ಮತ್ತೂರಿನ ಜಯರಾಮ—ಇವರೇ ಆ 'ಸಾಹಸಿಗಳು'.

ರಮೇಶ ೧೯೮೧ರಲ್ಲಿ ನ್ಯಾಯಾಲಯದಲ್ಲಿ ಶಿಕ್ಷೆ ಘೋಷಣೆಯಾಗುತ್ತಿದ್ದಂತೆಯೇ ಪರಾರಿಯಾಗಿ ಅನಂತರ ಬೆಂಗಳೂರಲ್ಲಿ ಸಿಕ್ಕಿಬಿದ್ದಿದ್ದವನು. (೪ನೇ ಪುಟಕ್ಕೆ)

ಶೃಂಗೇರಿ ಶರನ್ನವರಾತ್ರಿ ಉತ್ಸವ ಸಮಾಪ್ತಿ

ಶೃಂಗೇರಿ: ಇಲ್ಲಿನ ಅತಿ ಪ್ರಮುಖ ಉತ್ಸವವಾದ ಶರನ್ನವರಾತ್ರಿ ಪ್ರತಿ ವರ್ಷದಂತೆ ವೈಭವ, ಸಂಭ್ರಮದಿಂದ ನಡೆಯಿತು. ಸಹಸ್ರಾರು ಭಕ್ತರು ೧೫ ದಿನ ಪರ್ಯಂತ ವಿವಿಧ ಉತ್ಸವಗಳಲ್ಲಿ ಪಾಲ್ಗೊಂಡರು.

ಲ್ಯಾಪ್ರೊಸ್ಕೊಪಿಕ್ ಚಿಕಿತ್ಸೆಗೆ 'ಧರ್ಮ'ದ ಆಕ್ಷೇಪಣೆ ಸಲ್ಲ

ಕೊಪ್ಪ: ಇಲ್ಲಿನ ಲಯನ್ಸ್ ಕ್ಲಬ್ ಮತ್ತು ಆರೋಗ್ಯ ಕೇಂದ್ರ ಜಂಟಿಯಾಗಿ ನ. ೪ಕ್ಕೆ ವ್ಯವಸ್ಥೆಗೊಳಿಸಿರುವ ಉದರ ದರ್ಶಕ ಸಂತಾನ ಹರಣ ಶಸ್ತ್ರಚಿಕಿತ್ಸಾ ಶಿಬಿರದಲ್ಲಿ ಭಾಗವಹಿಸಲು ಮುಸ್ಲಿಂ ಮಹಿಳೆಯರು ನಿಷ್ಪತ್ತಿಲ್ಲವೆಂದು ತಿಳಿದು ಬಂದಿದೆ.

ಸಂತಾನ ನಿರೋಧ ಖುರಾನಿಗೆ ವಿರುದ್ಧ ಎಂಬ ನಂಬಿಕೆ ಇದಕ್ಕೆ ಕಾರಣವೆನ್ನಲಾಗಿದೆ.

ಭ್ರೂಣ ಹತ್ಯೆಯಲ್ಲ

ಲ್ಯಾಪ್ರೊಸ್ಕೊಪಿಕ್ ಚಿಕಿತ್ಸೆ ಭ್ರೂಣಹತ್ಯೆಯಲ್ಲ. ಭ್ರೂಣಹತ್ಯೆ ಎಲ್ಲಾಧರ್ಮದವರಲ್ಲೂ ನಿಷಿದ್ಧವೆಂದು ನಂಬಿಕೆಯಿದೆ. ಆದರೆ ಸಂತಾನ ಮಿತಿ ಗೊಳಿಸುವುದನ್ನು ಮನುಷ್ಯಪ್ರೇಮವಿರುವ ಯಾವ ಧರ್ಮವೂ ನಿಷೇಧಿಸಲಾರದು.

ಕೇವಲ ಮುಸ್ಲಿಮರಾಗಿ ಹುಟ್ಟಿದ ಮಾತ್ರಕ್ಕೇ ಈ ದೇಶದಲ್ಲಿ ಅಪನಂಬಿಕೆಗೆ ಗುರಿಯಾಗಿರುವ; ಬಡತನ, ನಿರುದ್ಯೋಗ, ಅನಕ್ಷರತೆ, ರೋಗರುಜಿನಗಳಿಂದ ತೊಳಲುತ್ತಿರುವ ಕೋಟ್ಯಾಂತರ ಭಾರತೀಯ ಮುಸ್ಲಿಮರ ಬಗೆಗಾದರೂ ಇಲ್ಲಿನ ಮುಸ್ಲಿಂ ಮುಖಂಡರುಗಳು ವಾಸ್ತವಿಕತೆಯಿಂದ ಯೋಚಿಸುವುದು ಅಗತ್ಯ. ಈ ದೃಷ್ಟಿಯಿಂದ, ಅಪಾರ ಮನುಷ್ಯ ಪ್ರೇಮವನ್ನು ಹೊತ್ತ ಇಸ್ಲಾಂ ಮತ್ತು ಖುರಾನನ್ನು ಅವರು ಸರಿಯಾಗಿ ಅರ್ಥಮಾಡಿಕೊಳ್ಳಬೇಕಾಗಿದೆ.

ಕೊಪ್ಪ ತಾ.ಅ.ಮಂ.ಸದಸ್ಯ ಜಿ.ಎಸ್.ಶ್ರೀನಿವಾಸ್ ಮೇಲೆ ಹಲ್ಲೆ

ಕೊಪ್ಪ: ಇಲ್ಲಿನ ತಾ.ಅ.ಮಂ.ಸದಸ್ಯರಾದ ಗೋಳಿಕೊಪ್ಪದ ಜಿ.ಎಸ್.ಶ್ರೀನಿವಾಸ್ ಅವರ ಮೇಲೆ ಅ.೨೫ರ ರಾತ್ರಿ ತೀವ್ರವಾಗಿ ಹಲ್ಲೆ ನಡೆದಿದ್ದು, ಚಿಕ್ಕಮಗಳೂರಿನ ಆಸ್ಪತ್ರೆಗೆ ದಾಖಲಾಗಿರುವ ಅವರು ನಿಧಾನವಾಗಿ ಚೇತರಿಸಿ ಕೊಳ್ಳುತ್ತಿದ್ದಾರೆ.

ಈ ಸಂಬಂಧ ಕೊಪ್ಪ ಪಂಚಾಯ್ತಿ ಉಪಾಧ್ಯಕ್ಷ ಜಿ.ಡಿ.ಪರಮೇಶ್ವರ ಅವರನ್ನು ಬಂಧಿಸಿ ಜಾಮೀನಿನ ಮೇಲೆ ಬಿಡುಗಡೆ ಮಾಡಿರುವುದಾಗಿ ತಿಳಿದು ಬಂದಿದೆ.

ಹಳೆಯ ಸೇಡು ಹಲ್ಲೆಗೆ ಕಾರಣವೆನ್ನಲಾಗಿದೆ. ಇದರಿಂದಾಗಿ ಅವರು ಅ.೩೦ರ ಪಂ. ಅಧ್ಯಕ್ಷ ಚುನಾವಣೆಯಲ್ಲಿ ಭಾಗವಹಿಸಲಾಗಲಿಲ್ಲ.

'ಜಗ್ಗು'ಗೆ ಕೊಪ್ಪದಲ್ಲಿ ಚಿತ್ರೀಕರಣ

ಕೊಪ್ಪ: ತರುಣ ನಿರ್ದೇಶಕ ವಿಜಯ್ ಗುಜ್ಜಾರ್ ನಿರ್ದೇಶಿಸುತ್ತಿರುವ, ಜಯಗೋಪಾಲ್ ಚಿತ್ರ ಕತೆಯ ಬಣ್ಣದ ಚಿತ್ರ 'ಜಗ್ಗು'ಗಾಗಿ ಕೊಪ್ಪ ಮತ್ತು ಕೋಡಿಹಿತ್ಲಿನಲ್ಲಿ ಒಂದು ವಾರದಿಂದ ಚಿತ್ರೀಕರಣ ನಡೆಯುತ್ತಿದೆ.

ಜಗ್ಗುವಾಗಿ ಅಂಬರೀಶ್ ಅಭಿನಯಿಸುತ್ತಿದ್ದು, ಇತರ ಮುಖ್ಯ ಪಾತ್ರಗಳಲ್ಲಿ ಆರತಿ, ಜೈಜಗದೀಶ್ ಗೂಳಿ 'ರಾಮು' ಮುಂತಾದವರು ಚಿತ್ರೀಕರಣದಲ್ಲಿ ಪಾಲ್ಗೊಂಡಿದ್ದರು.

ಇದಕ್ಕೂ ಮೊದಲು ತೀರ್ಥಹಳ್ಳಿ ಸುತ್ತಮುತ್ತ ಚಿತ್ರೀಕರಣ ನಡೆದಿತ್ತು. ಸುಮಾರು ೧೪ ಸಾವಿರ ಅಡಿಗಳಷ್ಟಿರುವ ಈ ಚಿತ್ರ ಮುಕ್ತಾಯದ ಹಂತದಲ್ಲಿ ಇರುವುದಾಗಿ ವಿಜಯ್ 'ಮುಂಜಾವು'ಗೆ ತಿಳಿಸಿದರು.

ಬೇಗಾರು ಸೇತುವೆ ರಿಪೇರಿ ಕೆಲಸ ಶುರುವಾಗಿಲ್ಲ

ಬೇಗಾರು: ಇಲ್ಲಿಗೆ ಸಮೀಪದ ಸೇತುವೆಯ ರಿಪೇರಿ ಕೆಲಸ ಇನ್ನೂ "ಶುರುವಾಗಿಲ್ಲ" ಎಂದು ತಿಳಿದು ಬಂದಿದೆ.

'ಮುಂಜಾವು'ಗೆ ಕೊಟ್ಟ ಮಾಹಿತಿಯಲ್ಲಿ ಲೋಕೋಪಯೋಗಿ ಇಲಾಖೆ ಸ॥ ಕಾ॥ ಇಂಜಿನಿಯರ್ ವೆಂಕಟಯ್ಯ ಅವರು "ಸೋಮವಾರದಿಂದಲೇ" (ಅ.೧೮) ಕೆಲಸ ಶುರುವಾಗುವುದಾಗಿ ತಿಳಿಸಿದ್ದರು. ('ಮುಂಜಾವು' ೧೭-೧೦-೮೨)

ಪತ್ರಿಕೆಗಳಿಗೆ ಹೇಳಿಕೆ ಕೊಟ್ಟು ಪ್ರಚಾರ ಪಡೆದು ಇನ್ನೂ ಯಾಕೆ ಕೆಲಸ ಪ್ರಾರಂಭಿಸಿಲ್ಲ ಎಂದು ಜನ ಕೇಳುತ್ತಿದ್ದಾರೆ; ಇಲಾಖೆಯ ಬಗ್ಗೆ ವ್ಯಂಗ್ಯವಾಡುತ್ತಿದ್ದಾರೆ.

ಅಡ್ಡಗದ್ದೆ ಬಳಿ ಮತ್ತೆ

ಗಂಧವಶ; ಮೂವರ ಬಂಧನ

ಶೃಂಗೇರಿ: ಅಡ್ಡಗದ್ದೆಯ ಬಳಿ ಸಿಂದೊಳ್ಳಿ ಎಂಬಲ್ಲಿ ಪುಸ॥ ೨೫ ಸಾವಿರ ರೂ. ಬೆಲೆಯ ಶ್ರೀಗಂಧವನ್ನು ಶೃಂಗೇರಿ ಪೋಲೀಸರು ಪತ್ತೆ ಹಚ್ಚಿ ಮೂವರನ್ನು ಬಂಧಿಸಿದ್ದಾರೆ.

ಈ ಒಂದು ತಿಂಗಳಿಂದೀಚೆಗೆ ಇಲ್ಲಿ ಇದು ಶ್ರೀಗಂಧ ಪತ್ತೆಯ ಎರಡನೆಯ ಪ್ರಕರಣವಾಗಿದೆ.

ಈ ಗಂಧ ಸಾಗಣೆ ಗುಂಪಿನ ಇನ್ನೊಬ್ಬ ವ್ಯಕ್ತಿ ತಲೆತಪ್ಪಿಸಿಕೊಂಡಿದ್ದು ಅವನಿಗಾಗಿ ಶೃಂಗೇರಿ ಪೋಲೀಸರು ತೀವ್ರವಾಗಿ ಹುಡುಕುತ್ತಿದ್ದಾರೆ.

ಅವ್ಯವಹಾರದ ಕೇಂದ್ರಗಳ ಮೇಲೆ ತೀವ್ರ ದಾಳಿ

ಈಚೆಗೆ ರಮಾನಂದ ರೈ ಶೃಂಗೇರಿ ಠಾಣಾಧಿಕಾರಿಯಾಗಿ ಬಂದಮೇಲೆ ಮಟ್ಕಾ ವ್ಯವಹಾರ, ಗಂಧ ಸಾಗಣೆ ಮುಂತಾದ ಅವ್ಯವಹಾರಗಳ ಮೇಲೆ ತೀವ್ರ ದಾಳಿಗಳನ್ನು ನಡೆಸುತ್ತಿರುವುದು ಆ ವ್ಯವಹಾರದ 'ಒಳ ಪ್ರಪಂಚ'ದಲ್ಲಿ ತಲ್ಲಣ ಹುಟ್ಟಿಸಿರುವಂತೆ ಜನ ಸಾಮಾನ್ಯರ ಅಭಿನಂದನೆಗೂ ಪಾತ್ರವಾಗಿರುವುದಾಗಿ ಹೇಳಲಾಗಿದೆ.

ಜಿ.ಡಿ.ಪರಮೇಶ್ವರ ಕೊಪ್ಪ ಪಂಚಾಯ್ತಿ ಹೊಸ ಅಧ್ಯಕ್ಷ

ಕೊಪ್ಪ: ಇಲ್ಲಿನ ಗ್ರಾಮ ಪಂಚಾಯ್ತಿಗೆ ಅ. ೩೦ ರಂದು ನಡೆದ ಅಧ್ಯಕ್ಷ ಚುನಾವಣೆಯಲ್ಲಿ ಗುಣವಂತೆಯ ಜಿ.ಡಿ.ಪರಮೇಶ್ವರ ಜಯಗಳಿಸಿದ್ದಾರೆ.

ಅವರಿಗೆ ೬ ಮತಗಳೂ ಇನ್ನೊಬ್ಬ ಅಭ್ಯರ್ಥಿ ಸಿಗದಾಳಿನ ಎಸ್.ಪಿ.ಚಂದ್ರಶೇಖರ್‌ಗೆ ೫ ಮತಗಳೂ ಬಂದಿದ್ದು ಒಂದು ಮತ ಅಸಿಂಧುವಾಯಿತು. ೩ ಜನ ಸದಸ್ಯರು ಗೈರು ಹಾಜರಾಗಿದ್ದರು.

ಹೊಸ ಅಧ್ಯಕ್ಷರ ಅವಧಿ ೧೯೮೩ರ ನವೆಂಬರ್ ವರೆಗಿರುತ್ತದೆ. ೧೯೭೮ರ ನವೆಂಬರಿನಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷರಾದ ಸಿಗದಾಳಿನ ಎಸ್.ಪಿ ರಾಮಮೋಹನ್ ಈಚೆಗಷ್ಟೇ ರಾಜೀನಾಮೆ ಸಲ್ಲಿಸಿದ್ದರು.

ಇನ್ನಾದರೂ ಪಂಚಾಯ್ತಿಯೊಳಗೆ ಅಭಿವೃದ್ಧಿ ಕೆಲಸಗಳು ನಡೆಯುತ್ತವೆಯೆಂದು ನಿರೀಕ್ಷಿಸಲಾಗಿದೆ.

ಹಳ್ಳದ ಅಣೆಕಟ್ಟಿನ ನಿರೀಕ್ಷೆಯಲ್ಲೇ

ಲೋಕ ಬಿಟ್ಟ ಕಾನೂರು ಹರಿಜನರು

ನರಸಿಂಹರಾಜಪುರ: ಈ ತಾಲ್ಲೂಕಿನ ಕಾನೂರು ಒಂದು ಕುಗ್ರಾಮ. ಇಲ್ಲಿ ಸುಮಾರು ೧೫-೧೬ ಹರಿಜನ ಕುಟುಂಬಗಳಿವೆ. ಅವರೆಲ್ಲ ೨೦ ವರ್ಷಗಳ ಹಿಂದೆ ಭದ್ರಾ ಮುಳುಗಡೆ ಪ್ರದೇಶದಿಂದ ಬಂದು ನೆಲೆಸಿದವರು. ಅವರಿಗೆ ತಲಾ ೪ ಎಕ್ರೆ ಭೂಮಿ ಕೂಡ ಕೊಡಲಾಗಿದೆ.

ಆದರೆ ಆ ಭೂಮಿಗೆ ನೀರಿನ ಆಶ್ರಯ ಅತಂತ್ರ. ಸೆಪ್ಟೆಂಬರ್ – ಅಕ್ಟೋಬರ್ ಹೊತ್ತಿಗೆಲ್ಲ ನೀರಿಲ್ಲದೆ ಪೈರು ಒಣಗುತ್ತದೆ. ಹಾಗೆಂದು ಬೆಳೆ ತೆಗೆಯದೆ ಇರಲು ಆಗುವುದಿಲ್ಲವಲ್ಲ.

(೪ನೇ ಪುಟಕ್ಕೆ)
